their demand to lift the lay-off and have enclosed a charter of 18 demands, which includes prohibiting of unauthorised contract labour, proper implementation of arbitration award for cement industry workmen and contract labour, shifting of hospital, grant of O.D. etc., The representatives of the Unions during the conciliation proceedings have stated, that since the management has disregarded the Office Bearers of the Unions by refusing to negotiate with them, the Office Bearers are not ready to negotiate with the management's representatives they are not empowered to take any decision. Hence, the Union Office Bearers insisted that the General Manager of the factory should discuss the strike matter with the President of the Union, Sri S.B. Patil, Ex MP and it was also informed that their Union President S. B. Patil would be available at Bagalkot after 18-2-1980 Therefore, the Union Office Bearers did not negotiate anything with the representatives of the management on 7-2-1980 and requested adjournment and to fix up the meeting after the arrival of their President. Since no compromise was arrived at between the two parties, the conciliation proceedings were adjourned and the Strike is continuing in the factory. The conciliation meeting has been fixed on 23-2-1980 at 4-00 P.M. in the Office of the Assistant Labour Commissioner Hubli Further developments of the conciliation meeting are awaited.

Here, it may be re-called, that the workmen had gone on strikes with effect from 16-11-1979 due to suspension of Sri C. B. Hankurki, Vice President of the Union and subsequently, the management had lock-out with effect from 16-11-1979 and the said dispute was conciliated and an agreement was signed before the Commissioner of Labour, Bangalore on 27-11-1979.

SRI B.B. SAYANAK(Belgaum).—Sir, Why is the Goverument disinterested with labour problem? Recently, there was a strike for about 3 months at Dandeli Paper Mills, Dandeli. The strike is going on for the last 1½ month. Why is this Goverument so must disinterested in tackling this labour problem? Another thing, there is scarcity of Cement. This is an essential commodity. When the labourors are insisting to discuss this with the President, the Management is not ready. Why all these things are happening? I request the Hon. Minister for Labour to take up this issue and solve the problem immediately.

SRI C. M. IBRAHIM (Minister for Labour).—It is not correct to say that the Government is disinterested in tackling labour problems We are really interested. I have already directed the Labour

Commissioner to give notices to the concerned management and labour representatives to have a meeting in his Chambers. I hope it will be settled as early as possible.

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಬಿ. ಬಿ. ಸಯನಕ್‌ರವರು ಎತ್ತಿದಂಥ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಒಂದು ದೊಡ್ಡ ಸಿಮೆಂಟ್ ಫ್ಯಾಕ್ಟರಿ ನಡೆಯುತ್ತಿರುತ್ತದೆ. ಅಲ್ಲಿಯೂ ಕೂಡ ಇದೇ ರೀತಿಯ ಸಮಸ್ಯೆಗಳು ಹಿಂದಿನಿಂದಲೂ ನಡೆದುಕೊಂಡು ಬರುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾವು ನೋಡಿದ ಹಾಗೆ ಅಲ್ಲಿಯ ಕೆಲಸಗಾರರು ಯಾವಾಗಲು ಸಮಾಧಾನದಿಂದ, ಶಾಂತಿಯಿಂದ ಕೆಲಸ ಮಾಡತಕ್ಕಂಥ ವಾತಾವರಣ ಕಂಡುಬರುತ್ತಿಲ್ಲ. ಇದಕ್ಕೆ ಕಾರಣ ಅಲ್ಲಿಯ ಮ್ಯಾನೇಜ್‌ಮೆಂಟ್ ಯಾವರೀತಿ ನಡೆದುಕೊಳ್ಳುತ್ತಿದೆ ಎಂಬುದನ್ನು ನೋಡಿದರೆ ತಮಗೆ ನಿಜಾಂಶವು ತಿಳಿದುಬರುತ್ತದೆ. ಅಲ್ಲಿರತಕ್ಕಂಥ ಕೆಲಸಗಾರರು ೨೪-೧-೧೯೮೦ ರಂದು ಹರತಾಳವನ್ನು ಪ್ರಾರಂಭಿಸಿದರೂ ಕೂಡ ಈವತ್ತಿನ ದಿನದವರೆಗೆ ಸಮಸ್ಯೆ ಬಗೆಹರಿಸುವುದರಲ್ಲಿ ಮ್ಯಾನೇಜ್‌ಮೆಂಟ್‌ಗೆ ಸಾಧ್ಯವಾಗಿಲ್ಲ. ಇವತ್ತಿನದಿವಸ ಇದರಿಂದ ಕೂಲಿ ಕಾರರಿಗೆ ಅಸಮಾಧಾನ ಉಂಟಾಗಿರುವುದಲ್ಲದೆ ಅವರು ಅನೇಕ ಕಷ್ಟನಷ್ಟಗಳನ್ನು ಎದುರಿಸತಕ್ಕಂಥ ದಿನ ಗಳು ಬಂದು ಒದಗಿರುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೇ. ಆ ಫ್ಯಾಕ್ಟರಿಯ ಮ್ಯಾನೇಜ್‌ಮೆಂಟ್ ನವರು ''ಲೇ ಆಫ್'' ಡಿಕ್ಲೇರ್ ಮಾಡಿದರೂ ಕೂಡ ಪರ್ಮನೆಂಟ್ ಕೆಲಸಗಾರರನ್ನು ಕೆಲಸಕ್ಕೆ ತೆಗೆದು ಕೊಳ್ಳದೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೆಲಸಗಾರರನ್ನು ತೆಗೆದುಕೊಂಡು ತಮ್ಮ ಕೆಲಸ ಕಾರ್ಯಗಳನ್ನು ನಡೆಸುತ್ತಿರುವುದರಿಂದ ಕೆಲಸಗಾರರಿಗೂ ಮತ್ತು ಮ್ಯಾನೇಜ್‌ಮೆಂಟ್‌ಗೂ ಅಸಮಾಧಾನ ಉಂಟಾಗಿರುತ್ತದೆ

ಅಧ್ಯಕ್ಷರು.—ಮಾನ್ಯ ಚಿಮ್ಮನಕಟ್ಟಿಯವರೇ ನೇರವಾಗಿ ವಿಷಯವನ್ನು ಹೇಳಿ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮ್ಯಾನೇಜ್‌ಮೆಂಟ್‌ನವರು ಕೂಲಿಗಾರರ ಸಮಸ್ಯೆಯನ್ನು ಬಗೆ ಹರಿಸದೆ ಪೋಲೀಸ್‌ನವರನ್ನು ಕರೆಸಿ ಅವರ ಮೇಲೆ ದೌರ್ಜನ್ಯ ಕೃತ್ಯವನ್ನು ಮಾಡಿ, ಅವರನ್ನು ಹೊಡೆಸಿ, ಬಡಿಸಿ ಸಿವಿಲ್ ಕೋರ್ಟಿನಲ್ಲಿ ಕೇಸ್ ನಡೆಸುತ್ತಿರುವ ಪ್ರಸಂಗವಿರುತ್ತದೆ. ಮ್ಯಾನೇಜ್‌ಮೆಂಟ್‌ನವರು ಪೋಲೀಸ್ ಅಧಿಕಾರಿಗಳಿಂದ ಅಲ್ಲಿಯ ಕೆಲಸಗಾರರನ್ನು ಹೊಡೆಸಿ ಅವರ ಮೇಲೆ ದೌರ್ಜನ್ಯ ಕೃತ್ಯವನ್ನು ಏತಕ್ಕೆ ಮಾಡಬೇಕಿತ್ತು ಎಂಬುದನ್ನು ಸರ್ಕಾರದವರು ವಿಚಾರಣೆ ಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ಎರಡನೆಯದಾಗಿ ಪರ್ಮನೆಂಟ್ ಕೆಲಸಗಾರರನ್ನು ತೆಗೆದುಕೊಳ್ಳದೆ ಕಾಂಟ್ರಾಕ್ಟ್ ಕೆಲಸಗಾರರನ್ನು ತೆಗೆದಂಕೊಳ್ಳುವುದನ್ನು ನಿಲ್ಲಿಸಿ ಪರ್ಮನೆಂಟ್ ಕೆಲಸಗಾರರನ್ನೇ ತೆಗೆದುಕೊಂಡು ಫ್ಯಾಕ್ಟರಿಯನ್ನು ನಡೆಸು ವಂತೆ ಮ್ಯಾನೇಜ್‌ಮೆಂಟ್‌ಗೆ ಒತ್ತಾಯವನ್ನು ತರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಸದಸ್ಯರು ಹೊಸದಾಗಿ ಪ್ರಸ್ತಾಪ ಮಾಡಿರುತ್ತಾರೆ, ಆದರೂ ಸರ್ಕಾರದ ವತಿಯಿಂದ ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡುತ್ತೇನೆ, ಪೋಲೀಸ್‌ನವರು ಕಾರ್ಮಿಕರ ಮೇಲೆ ದಬ್ಬಾಳಿಕೆಯಂನ್ನು ಮಾಡತಕ್ಕಂಥಾದ್ದು ಹಿಂದೆ ನಡೆಯುತ್ತಿತ್ತು. ನಾನು ಲೇಬರ್ ಮಂತ್ರಿಯಾದ ಮೇಲೆ ಇಂಥ ಯಾವುದೇ ದೌರ್ಜನ್ಯ ಕೃತ್ಯಗಳು ಪೋಲೀಸ್‌ನವರಿಂದ ನಡೆದರೆ ಅದರ ಬಗ್ಗೆ ನನಗೆ ಮಾಹಿತಿಗಳನ್ನು ಒದಗಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲವೆಂದು ಇಷ್ಟು ಮಾತ್ರ ಹೇಳುತ್ತೇನೆ. ಈಗ ನಡೆದಿರತಕ್ಕಂಥ ಘಟನೆಗಳ ಬಗ್ಗೆ ಮ್ಯಾನೇಜ್‌ಮೆಂಟ್‌ನವರನ್ನೂ ಕರೆಸಿಕೊಂಡು ಚರ್ಚಿಸಿ ಫ್ಯಾಕ್ಟರಿಯು ಸುಗಮವಾಗಿ ನಡೆಯುವಂತೆ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಮಂತ್ರಿಯವರ ಗಮನಕ್ಕೆ ಈ ವಿಷಯ ಬಂದಿರುತ್ತದೋ ಇಲ್ಲವೋ ಗೊತ್ತಿಲ್ಲ, ಅಲ್ಲಿ ನಡೆದ ಸಂಗತಿ ಇಷ್ಟು ಮಾತ್ರವಿರುತ್ತದೆ. ದಿನಾಂಕ ೧೮ನೇ ಫೆಬ್ರುವರಿ ೧೯೮೦ನೇ ದಿವಸ ಕಾರ್ಮಿಕರು ಸ್ಟ್ರೈಕ್ ಮಾಡಿದ್ದರೆಂದು ಫ್ಯಾಕ್ಟರಿಯವರು ಕಾಂಟ್ರಾಕ್ಟ್ ಲೇಬರರ್ಸ್‌ಗಳನ್ನು ಸಬ್‌ಸ್ಟಿಟ್ಯೂಟ್ ಮಾಡಿದ್ದರಿಂದ ಬಡಿದಾಟವಾಯಿತು. ಬಡಿದಾಟವಾದ ಕಾರಣ ಪೋಲೀಸ್‌ನವರು ಯೂನಿಯನ್ ಕಾರ್ಮಿಕರನ್ನು ಅರೆಸ್ಟ್ ಮಾಡಿಕೊಂಡು ಹೋದರು. ಅನಂತರ ಕೋರ್ಟ್‌ಲ್ಲಿ ಮೊಕದ್ದಮೆ ಯನ್ನು ಹೂಡಿದರು. ಇದಾದ ನಂತರ ಯೂನಿಯನ್ ಕಾರ್ಯದರ್ಶಿಯವರನ್ನೂ ಬಹಳ ತೀಕ್ಷ್ಣವಾಗಿ